NOVEMBER 11,2024
ALL INDIA RADIO- DHARWAD
PRADESH SAMACHARA (KANNADA) 12PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದುತ್ತಿರುವವರು: ವಿವೇಕಾದಿತ್ಯ ಕನಿಯಾಲ

<><><>

ಕೇಂದ್ರ ಸರ್ಕಾರ ಪುರಸ್ಕೃತ, ಭಾರತ್ ಉತ್ಪನ್ನಗಳನ್ನು ಯೋಗ್ಯ ಹಾಗೂ ಸೋವಿ ದರದಲ್ಲಿ ಮಾರಾಟ ಮಾಡುವ ಯೋಜನೆಯ ವಾಹನಗಳಿಗೆ, ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ ಆವರಣದಲ್ಲಿ, ಕೇಂದ್ರ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಚಾಲನೆ ನೀಡಿದರು. ಕೇಂದ್ರ ಸರ್ಕಾರವು ರೈತರ ಹಾಗೂ ಗ್ರಾಹಕರ ಹಿತ ಕಾಪಾಡಲು ಬದ್ಧವಾಗಿದೆ. ಭಾರತ್ ಬ್ರಾಂಡ್ ಅಡಿಯಲ್ಲಿ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಅಕ್ಕಿ, ಗೋದಿ ಸಹಿತ ಬೇಳೆಗಳನ್ನು ಮಾರಾಟ ಮಾಡುವ ಮೂಲಕ ನಾಗರಿಕರಿಗೆ ಅಗ್ಗದ ದರದಲ್ಲಿ ಉತ್ತಮ ದರ್ಜೆ ಆಹಾರ ಪದಾರ್ಥಗಳನ್ನು ಪೂರೈಸಲಾಗುತ್ತದೆ ಎಂದರು.

<><><>

ವೀರ ವನಿತೆ ಒನಕೆ ಓಬವ್ವನವರ ಜಯಂತಿಯನ್ನು, ಇಂದು ರಾಜ್ಯಾದ್ಯಂತ, ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ. ಬೆಂಗಳೂರಿನ ಜೆ.ಸಿ. ರಸ್ತೆಯ, ಕನ್ನಡ ಭವನದ ನಯನ ರಂಗಮಂದಿರದಲ್ಲಿ, ಇನ್ನು ಕೆಲವೇ ನಿಮಿಷಗಳಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಓಬವ್ವನವರ ಸ್ಮೃತಿಗೆ ಶ್ರದ್ಧಾಂಜಲಿ ಸಲ್ಲಿಸಿ, ಜಯಂತ್ಯುತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ, ಆಯೋಜಿತ 'ವೀರ ವನಿತೆ ಒನಕೆ ಓಬವ್ವ ಜಯಂತಿ'ಯ ಪ್ರಧಾನ ಕಾರ್ಯಕ್ರಮದಲ್ಲಿ, ಬೆಂಗಳೂರಿನ ಉರಿಲಿಂಗ ಪೆದ್ದಿ ಮಠದ, ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಸಾನ್ನಿಧ್ಯ ವಹಿಸಲಿದ್ದಾರೆ. ಧಾರವಾಡ, ಚಿತ್ರದುರ್ಗ ಸೇರಿದಂತೆ, ರಾಜ್ಯದ 31 ಜಿಲ್ಲಾಡಳಿತಗಳು, 'ವೀರ ವನಿತೆ ಒನಕೆ ಓಬವ್ವನವರ ಜಯಂತ್ಯುತ್ಸವ' ನಿಮಿತ್ತ, ವಿಶೇಷ ಉಪನ್ಯಾಸ, ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಿ, ವಿಶೇಷ ಕಾರ್ಯಕ್ರಮ ಆಯೋಜಿಸಿವೆ. ಪ್ರಭಾತಫೇರಿ ಕೊನೆಗೊಂಡಿದ್ದು, ವೇದಿಕೆಯ ಕಾರ್ಯಕ್ರಮಗಳು ಪ್ರಗತಿಯಲ್ಲಿವೆ.

<><><>

ವೀರ ವನಿತೆ ಒನಕೆ ಓಬವ್ವ, 18 ನೇ ಶತಮಾನದಲ್ಲಿ, ಚಿತ್ರದುರ್ಗ ಕೋಟೆಯ ಪಾಳೆಗಾರನಾಗಿದ್ದ, ಮದಕರಿ ನಾಯಕರ ಕೋಟೆಯ ಕಾವಲುಗಾರನಾಗಿದ್ದ, ಕಹಳೆ ಮುದ್ದ ಹನುಮಪ್ಪನವರ ಶ್ರೀಮತಿ. ಕನ್ನಡ ನಾಡಿನ ವೀರ ವನಿತೆಯರಾದ ಕಿತ್ತೂರು ರಾಣಿ ಚನ್ನಮ್ಮ, ರಾಣಿ ಅಬ್ಬಕ್ಕದೇವಿ ಅವರ ಸಾಲಿನಲ್ಲಿ, ಒನಕೆ ಓಬವ್ವ ಅವರನ್ನು ಪರಿಗಣಿಸಲಾಗುತ್ತದೆ. ಚಿತ್ರದುರ್ಗದ ಕ್ರೀಡಾಂಗಣಕ್ಕೆ ಒನಕೆ ಓಬವ್ವ ಅವರ ಹೆಸರನ್ನಿಟ್ಟು ಗೌರವಿಸಲಾಗಿದೆ.

<><><>

ವಿಶ್ವ ದರ್ಜೆಯ ಕಂಪೆನಿಗಳನ್ನು ಮುನ್ನಡೆಸುವ ಪ್ರತಿಭಾವಂತರನ್ನು, ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ – ಟ್ರಿಪಲ್ ಐ.ಟಿ. ತಯಾರು ಮಾಡಬೇಕು. ಮುಂದಿನ ಹತ್ತು ವರ್ಷಗಳಲ್ಲಿ ಈ ಸಂಸ್ಥೆಯ ಇಬ್ಬರಾದರೂ ವಿಶ್ವದ ಅತ್ಯುತ್ತಮ ಕಂಪನಿಗಳ ಮುಖ್ಯಸ್ಥರಾಗಬೇಕು ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ಆಶಿಸಿದ್ದಾರೆ. ಧಾರವಾಡದ ಟ್ರಿಪಲ್ ಐ.ಟಿ. ದಶಮಾನೋತ್ಸವದ ಅಂಗವಾಗಿ, ಆಯೋಜಿಸಿದ್ದ 'ಅಡೆತಡೆಗಳನ್ನು ಮೀರಿ ಹಾಗೂ ಹೊಸ ಪ್ರಮಾಣೀಕರಣಗಳನ್ನು ಸ್ಥಾಪಿಸಿ: ಅನ್ವೇಷಿಸಿ, ಅನುಭವಿಸಿ, ಉತ್ಕೃಷ್ಟತೆ ಸಾಧಿಸಿ' – ಟ್ರಿಪಲ್ ಐ.ಟಿ. ಕಾನ್‌ಕ್ಲೇವ್ – 2024 ಸಮಾವೇಶವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಉದ್ಯೋಗಾಕಾಂಕ್ಷಿಯಾಗದೇ, ಉದ್ಯೋಗದಾತರಾಗುವ, ಉದ್ಯಮಿಯಾಗುವ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಸಾಮಾಜಿಕ ಮಾಧ್ಯಮಗಳ ನವ ಆವೃತ್ತಿಯನ್ನು ಅಭಿವೃದ್ಧಿಪಡಿಸುವ ಗುರಿ ನಿಗದಿಪಡಿಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳು, ಬೋಧಕರು, ಪರಿಣಿತರು ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು. ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ ಮಾತನಾಡಿ, ಭಾರತವನ್ನು ವಿಶ್ವ ಶಕ್ತಿಯಾಗಿಸಲು, ಉತ್ಕೃಷ್ಟ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದು ಎಂದರು.

<><><>

ಸಂಗೀತ, ಸಾಹಿತ್ಯ, ಲಲಿತ ಕಲೆ ಹಾಗೂ ಕ್ರೀಡೆ, ಮನಸ್ಸನ್ನು ಉಲ್ಲಸಿತಗೊಳಿಸುತ್ತವೆ. ಸಂಗೀತ ಕಲಿಯುವುದರಿಂದ ಹಾಗೂ ಆಲಿಸುವುದರಿಂದ ಏಕಾಗ್ರತೆ ಮತ್ತು ಶಾಂತ ಚಿತ್ತ ರೂಢಿಸಿಕೊಳ್ಳಬಹುದು ಎಂದು, ಕರ್ನಾಟಕ ವಿಶ್ವವಿದ್ಯಾಲಯದ ಪ್ರಭಾರ ಉಪ ಕುಲಪತಿ ಪ್ರೊಫೆಸರ್ ಬಿ.ಎಂ ಪಾಟೀಲ ಹೇಳಿದ್ದಾರೆ. ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಕೇಂದ್ರ ಸಂಸ್ಕೃತಿ ಮಂತ್ರಾಲಯದ ಸಹಯೋಗದಲ್ಲಿ, ಕುಮಾರೇಶ್ವರ ಕಲ್ಚರಲ್ ಸೊಸೈಟಿ ಆಯೋಜಿಸಿದ್ದ, ಪಂಡಿತ ವಸಂತ ಕನಕಾಪೂರ ಹಾಗೂ ಪಂಡಿತ ಬಸವರಾಜ ಬೆಂಡಿಗೇರಿ ಸ್ಮರಣಾರ್ಥ, ರಾಷ್ಟ್ರೀಯ ಸಂಗೀತೋತ್ಸವವನ್ನು ಉದ್ಘಾಟಿಸಿ, ಮಾತನಾಡಿದರು. ಹಿರಿಯ ರಂಗಭೂಮಿ ಕಲಾವಿದ, ಡಾಕ್ಟರ್ ಶಶಿಧರ ನರೇಂದ್ರ ಮಾತನಾಡಿ, 'ವಸಂತ ಕನಕಾಪೂರ ಮತ್ತು ಬಸವರಾಜ ಬೆಂಡಿಗೇರಿ ಅವರ ಸಾಧನೆಯ ದಾರಿ, ಯುವ ಕಲಾವಿದರಿಗೆ ಮಾದರಿ ಎಂದರು.

<><><>

ಧಾರವಾಡದ ಆರ್.ಎನ್ ಶೆಟ್ಟಿ ಕ್ರೀಡಾಂಗಣದಲ್ಲಿ ನಡೆದ, ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ, ಧಾರವಾಡದ ಬಾಪೂಜಿ ವಿದ್ಯಾ ನಿಕೇತನ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿ, ತರುಣಗೌಡ ಕಾಮನಗೌಡ ಚಕ್ರ ಎಸೆತದಲ್ಲಿ ಪ್ರಥಮ ಹಾಗೂ ಮಾಂತೇಶ ಹೊನ್ನಳ್ಳಿ ಹ್ಯಾಮರ್ ಎಸೆತದಲ್ಲಿ, ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

<><><>

ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸಾಯಿಟಿ ಸಹಯೋಗದಲ್ಲಿ ಮಹಾರಾಷ್ಟ್ರ ಅರಣ್ಯ ಇಲಾಖೆ ರಣಹದ್ದುಗಳಿಗೆ 'ಸೆಟಲೈಟ್ ಟೆಲಿಮೆಟ್ರಿ' ಅಳವಡಿಸಿ, ಕೈಗೊಂಡಿರುವ ಅಧ್ಯಯನ ಗಮನ ಸೆಳೆದಿದೆ. ಮಹಾರಾಷ್ಟ್ರದ ತಾಡೋಬಾ–ಅಂಧಾರಿ ರಾಷ್ಟ್ರೀಯ ವನ್ಯಧಾಮ ಈ ಅಧ್ಯಯನದ ಪೋಷಕ ಸಂಸ್ಥೆ. ಪಶ್ಚಿಮಘಟ್ಟದ ಕಾರವಾರ ಸುತ್ತಲಿನ ಪ್ರದೇಶವನ್ನು ರಣಹದ್ದುಗಳು, ವಾಸಕ್ಕೆ ಆಯ್ಕೆ ಬಳಸುತ್ತಿರುವುದು ದೃಢಪಟ್ಟಿದೆ. ಅಧ್ಯಯನಕ್ಕೆ ಬಳಸಲಾದ, 10 ರಣಹದ್ದುಗಳ ಪೈಕಿ, ಒಂದು ಕಾರವಾರಕ್ಕೆ ಬಂದಿದೆ. ಅಂಧಾರಿ ಹುಲಿ ಸಂರಕ್ಷಿತಾರಣ್ಯದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜಿತೇಂದ್ರ ರಾಮಗಾಂವಕರ ಮಾತನಾಡಿ, ರಣಹದ್ದುಗಳ ಸಂತತಿಯನ್ನು ಪುನರುಜ್ಜೀವಿತಗೊಳಿಸಲು, ಹರ್ಯಾಣದಿಂದ ಹತ್ತು ರಣಹದ್ದುಗಳನ್ನು ತಂದು, ಜಿ.ಪಿ.ಎಸ್. ಟ್ರ್ಯಾಕರ್ ಅಳವಡಿಸಿ, ಅಧ್ಯಯನ ನಡೆಸಲಾಗುತ್ತಿದೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>